## ಕರ್ನಾಟಕ ಸರ್ಕಾರದ ನಡವಳಿಗಳು

***ವಿಷಯ:-*** ಕನಕಪುರ ತಾಲ್ಲೂಕಿನ ಗೊಳ್ಳಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅರೆಮೇಗಲದೊಡ್ಡಿಯಲ್ಲಿ ಕಿರು ನೀರು ಸರಬರಾಜು ಕಾಮಗಾರಿಯು ನಡೆಯದಿದ್ದರೂ ಬೇರೆ ಕಾಮಗಾರಿಯ ಪೋಟೋಗಳನ್ನು ಸಲ್ಲಿಸಿ, ಹಣ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಆರೋಪಗಳ ಬಗ್ಗೆ ಇಲಾಖೆ ವಿಚಾರಣೆ-ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ ಆದೇಶ.

***ಓದಲಾಗಿದೆ:***

| | |
|---|---|
| *1.* | ನಿಬಂಧಕರು ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಅರೆ ಪತ್ರ ಸಂಖ್ಯೆ: Compt/uplok/BD-855/2016/DRE-5 Dated:02.6.2017. |
| *2.* | ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ12(3)ರನ್ವಯ ವರದಿ ಸಂಖ್ಯೆ: Compt/uplok/BD-855/2016/DRE-5 Dated:20.5.2017. |

***<u>ಪ್ರಸ್ತಾವನೆ:-</u>***

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರುರವರು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ:02.6.2017 ರ ಅರೆ ಸರ್ಕಾರಿ ಪತ್ರದೊಂದಿಗೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಾಯುಕ್ತರವರ ದಿನಾಂಕ:20.5.2017 ರ ಲೋಕಾಯುಕ್ತ ಕಾಯ್ದೆಯ ಕಲಂ 12(3) ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ, ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ನಾರಾಯಣಸ್ವಾಮಿ, ಹಲಗೂರು ಗ್ರಾಮ, ಮಳವಳ್ಳಿ ತಾಲ್ಲೂಕು, ರಾಮನಗರ ಇವರು ಲೋಕಾಯುಕ್ತ ಕಛೇರಿಗೆ ದೂರೊಂದನ್ನು ಸಲ್ಲಿಸಿ, ಕನಕಪುರ ತಾಲ್ಲೂಕು ಐ.ಗೊಳ್ಳಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅರೆಮೇಗಲದೊಡ್ಡಿಯಲ್ಲಿ ಕೀರು ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಪುಟ್ಟಲಿಂಗಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕನಕಪುರ ಇವರು ಕಾಮಗಾರಿ ನಡೆಯದಿದ್ದರೂ ಸಹ ಬೇರೆ ಗ್ರಾಮದ ಯಾವುದೋ ಕಾಮಗಾರಿಯನ್ನು ತೋರಿಸಿ, ಸುಮಾರು 5 ಲಕ್ಷ ದುರುಪಯೋಗಪಡಿಸಿಕೊಂಡಿರುತ್ತಾರೆಂದು, ಆದ್ದರಿಂದ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಸದರಿ ದೂರಿನ ಬಗ್ಗೆ ಮಾನ್ಯ ಉಪಲೋಕಾಯುಕ್ತರು ಈ ಬಗ್ಗೆ ಆರೋಪಿತರಾದ ಶ್ರೀ ಟಿ.ಪುಟ್ಟಲಿಂಗಯ್ಯ ಇವರಿಂದ ವಿವರಣೆ ಪಡೆದಿದ್ದು, ವಿವರಣೆಯಲ್ಲಿ ಕಾಮಗಾರಿಯನ್ನು 2013-14 ನೇ ಸಾಲಿನಲ್ಲಿ ಎನ್.ಆರ್.ಡಿ.ಡಬ್ಲ್ಯೂ.ಪಿ ಯೋಜನೆಯಡಿ 5.00 ಲಕ್ಷ ಅಂದಾಜು ವೆಚ್ಚದಲ್ಲಿ ಸೋಮಶೇಖರ್, ಒಂದನೇ ಗುತ್ತಿಗೆದಾರರು ಇವರಿಂದ ನಿರ್ವಹಿಸಲಾಗಿದ್ದು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಆದ ಶ್ರೀ ಸಿ.ಎಸ್.ಗುರುಸ್ವಾಮಿ, ಇವರ ಕಾಮಗಾರಿ ಪರಿಶೀಲನೆ ನಡೆಸಿದ ನಂತರ ಗುತ್ತಿಗೆದಾರರಿಗೆ ಹಣ ಸಂದಾಯ ವಾಗಿರುತ್ತದೆಯೆಂದು, ಮಾರ್ಚ್ ಅಂತ್ಯದಲ್ಲಿ ಕೆಲಸದ ಒತ್ತಡ ಇದ್ದುದ್ದರಿಂದ ಕಾಮಗಾರಿಯ ಛಾಯಾಚಿತ್ರಗಳನ್ನು ಬದಲಾವಣೆ ಆಗಿರಬಹುದೆಂದು ಕಾಮಗಾರಿಯನ್ನು ಗೊಲ್ಲಹಳ್ಳಿ ಗ್ರಾಮ ಪಂಚಾಯತ್‌ಗೆ ಹಸ್ತಾಂತರ ಮಾಡಲಾಗಿದ್ದು, ದೂರುದಾರರು ಸರ್ಕಾರಿ ಅಧಿಕಾರಿಗಳ ಮೇಲೆ ದೂರು ಕೊಡುವುದನ್ನೇ ಹವ್ಯಾಸ ಮಾಡಿಕೊಂಡಿರುತ್ತಾರೆಂದು ಆದ್ದರಿಂದ ಸದರಿ ದೂರನ್ನು ವಜಾ ಮಾಡುವಂತೆ ಕೋರಿರುವುದು ಕಂಡು ಬರುತ್ತದೆ.

ಮಾನ್ಯ ಉಪಲೋಕಾಯುಕ್ತರು ದೂರುದಾರರಿಂದ ಪ್ರತ್ಯುತ್ತರ ಪಡೆದಿದ್ದು, ಕಾಮಗಾರಿಯ ವಿವರಗಳು, ಛಾಯಾ ಚಿತ್ರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಪರಿಶೀಲಿಸಿ, ದೂರುದಾರರು ಬೇರೆ ಗ್ರಾಮದ 2ಪೋಟೋಗಳನ್ನು

---2

ಅರೇಮೇಗಲದೊಡ್ಡಿಯ ಕಾಮಗಾರಿಗೆ ಸಂಬಂಧಿಸಿರುತ್ತದೆಯೆಂದು ಅಂತರ ಜಾಲದಲ್ಲಿ ತೋರಿಸಿದ್ದು, ಅದು ಪರಿಶೀಲನೆ ಹಂತದಲ್ಲಿದೆ ಅಂತಾ ನಮೂದಿಸಲಾಗಿದೆ ಎಂದು ತದ ನಂತರವಾದರೂ ಸಹ ಕಾಮಗಾರಿ ಪೂರ್ಣಗೊಂಡ ನಂತರ ಅಂತರಜಾಲದಲ್ಲಿ ಪೋಟೋಗಳನ್ನು ಅಪ್‌ಲೋಡ್ ಮಾಡಿಸಿಲ್ಲವೆಂದು, ಆರೋಪಿತ ಅಧಿಕಾರಿಯು ಅರೇಮೇಗಲದೊಡ್ಡಿ ಗ್ರಾಮಕ್ಕೆ ಸಂಬಂಧವಿಲ್ಲದೇ ಇರುವ 2 ಪೋಟೋಗಳನ್ನು ಅಫ್ ಲೋಡ್ ಮಾಡಿಸಿ ಕಿರು ನೀರು ಸರಬರಾಜು ಯೋಜನೆ ಕಾಮಗಾರಿ ಅಂತ ತೋರಿಸಿ, ಕರ್ತವ್ಯ ಲೋಪವೆಸಗಿರುವುದಕ್ಕೆ ಸಾಕಷ್ಟು ಆಧಾರಗಳು ಇರುತ್ತವೆಯೆಂದು ಅಪಾದಿತರು ಮೇಲೆ ತಿಳಿಸಿರುವಂತೆ ಕರ್ತವ್ಯ ಲೋಪವೆಸಗಿರುವುದ ಕಂಡು ಬರುತ್ತಿದ್ದು, ಅಪಾದಿತರು ಸರ್ಕಾರಿ ನೌಕರರಾಗಿದ್ದು, ಅವರ ಕಾರ್ಯನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿ, ಕ.ನಾ.ಸೇ (ನಡತೆ) ನಿಯಮಗಳು 1966 ನಿಯಮ 3(1) ನ್ನು ಉಲ್ಲಂಘಿಸಿರುವುದು ಕಂಡು ಬರುವುದರಿಂದ ಅವರ ವಿರುದ್ಧ ವಿವರವಾದ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ತಮ್ಮ ಪ್ರಾಧಿಕಾರಕ್ಕೆ ವಹಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ಕಲಂ 12(3) ರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಕನಕಪುರ ತಾಲ್ಲೂಕು ಐ.ಗೊಲ್ಲಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಅರಮೇಗಲದೊಡ್ಡಿ ಗ್ರಾಮದಲ್ಲಿ 5.00ಲಕ್ಷ ಅಂದಾಜು ವೆಚ್ಚದಲ್ಲಿ ಕಿರು ನೀರು ಸರಬರಾಜು ಯೋಜನೆಯಡಿ ಕಾಮಗಾರಿಯನ್ನು ನಿರ್ವಹಿಸಲಾಗಿದೆ ಎಂದು ಹಣ ಪಾವತಿಸಲಾಗಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ಛಾಯಾ ಚಿತ್ರಗಳು ಬೇರೆ ಗ್ರಾಮದ ಛಾಯಾಚಿತ್ರಗಳಾಗಿರುತ್ತವೆ. ಇದರಿಂದ ಅರಮೇಗಲದೊಡ್ಡಿ ಗ್ರಾಮದಲ್ಲಿ ಕಾಮಗಾರಿ ನಿರ್ವಹಿಸಿರುವಂತೆ ದಾಖಲೆಗಳನ್ನು ಸೃಷ್ಟಿಸಿ, ಬೇರೆ ಗ್ರಾಮದ ಕಾಮಗಾರಿಗಳ ಛಾಯಾ ಚಿತ್ರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಆರೋಹಿಸಿ, ಹಣ ಪಾವತಿಸಿರುವ ಸಾಧ್ಯತೆಗಳನ್ನು ಕಂಡು ಬಂದಿರುತ್ತದೆ. ಶ್ರೀ ಪುಟ್ಟಲಿಂಗಯ್ಯ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕನಕಪುರ ಇವರು ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ ಸದರಿಯವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖೆ ವಿಚಾರಣೆಯನ್ನು ನಡೆಸುವುದು ಅಗತ್ಯವೆಂದು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 66 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:22.6.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ಶ್ರೀ ಟಿ. ಪುಟ್ಟಲಿಂಗಯ್ಯ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕನಕಪುರ ಇವರ ವಿರುದದ್ಧ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖೆ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ 1957ರ ನಿಯಮ 11 ರಂತೆ ನಡೆಸುವ ಸಲುವಾಗಿ ಪ್ರಕರಣವನ್ನು ಸದರಿ ನಿಯಮಗಳ ನಿಯಮ-14(ಎ) ರಂತೆ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ರಂಗನಗೌಡ) 22/6/20

ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಉಪ ನಿಬಂಧಕರು, ವಿಚಾರಣೆಗಳು-5, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಸಂಬಂಧಿಸಿದ ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಇವರು ಮುಖಾಂತರ)
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್) /ಜಂಟಿ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.